ಕರ್ನಾಟಕ ಸರ್ಕಾರ
ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು

ಸಂಖ್ಯೆ: ಇ-ಆಡಳಿತ : ಸಿ.ಸೇ.ಮಾಹಿತಿ: 01/2018-19 ದಿನಾಂಕ: 07.02.2019

**ತುರ್ತು ಕ್ರಮಕ್ಕಾಗಿ**

# ಸುತ್ತೋಲೆ

ವಿಷಯ:- ಶಿಕ್ಷಣ ಇಲಾಖೆಯ ಎಲ್ಲಾ ಸಿಬ್ಬಂದಿಯ ಸೇವಾಮಾಹಿತಿಯನ್ನು ತಂತ್ರಾಂಶದಲ್ಲಿ ಅಳವಡಿಸುವ ಮತ್ತು ಇಂದೀಕರಿಸುವ ಬಗ್ಗೆ.

ಉಲ್ಲೇಖ:
1. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಇ-ಆಡಳಿತ ಶಿಕ್ಷಕರ ಮಾಹಿತಿ: 1/2017-18 ದಿನಾಂಕ: 20.04.2017.
2. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಇ-ಆಡಳಿತ ಬೋಸೇಮಾ: 01/ 2017-18 ದಿನಾಂಕ: 24.07.2018.
3. ಈ ಕಛೇರಿಯ ಸುತ್ತೋಲೆ ಸಂಖ್ಯೆ: ಇ-ಆಡಳಿತ / ಅಧಿ.ಸೇ.ಮಾಹಿತಿ: 02/2018-19 ದಿನಾಂಕ: 05.01.2019.
4. ಆಯುಕ್ತರ ಕಛೇರಿಯಲ್ಲಿ ನಡೆದ ಜಿಲ್ಲಾ ನೋಡಲ್ ಅಧಿಕಾರಿಗಳ ಸಭೆ ದಿನಾಂಕ: 04.01.2019 ರಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ.

---------

ಸಾರ್ವಜನಿಕ ಶಿಕ್ಷಣ ಇಲಾಖೆಯ ಸರ್ಕಾರಿ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ಶಿಕ್ಷಕರ ಸೇವಾಮಾಹಿತಿ, ಬೋಧಕೇತರ ಸಿಬ್ಬಂದಿಯ ಸೇವಾಮಾಹಿತಿ ಮತ್ತು ಅಧಿಕಾರಿಗಳ ಸೇವಾಮಾಹಿತಿಯನ್ನು ಉಲ್ಲೇಖದ ಆದೇಶಗಳನ್ವಯ ನಿಗದಿತ ತಂತ್ರಾಂಶಗಳಲ್ಲಿ ಅಳವಡಿಸಲಾಗಿದೆ.

ಮುಂದುವರೆದಂತೆ, ಇನ್ನು ಮುಂದೆ ಇಲಾಖೆಯ ಎಲ್ಲಾ ಸಿಬ್ಬಂದಿಯ ಸೇವಾ ಸೌಲಭ್ಯಗಳನ್ನು ಆನ್‌ಲೈನ್ ತಂತ್ರಾಂಶಗಳ ಮೂಲಕ ನೀಡಲು ಉದ್ದೇಶಿಸಿದ್ದು, ತಂತ್ರಾಂಶಗಳು ಸಿದ್ಧವಾಗಿವೆ. (ಉದಾ: ರಜೆ ಮಂಜೂರಾತಿ, ಕಾಲಮಿತಿ ವೇತನ ಬಡ್ತಿ, ಪಾಸ್ ಪೋರ್ಟ ಪಡೆಯಲು ಇಲಾಖಾ ನಿರಾಕ್ಷೇಪಣಾ ಪ್ರಮಾಣ ಪತ್ರ, ಅಧಿಕಾರಿಗಳ ತಾತ್ಕಾಲಿಕ ಪ್ರವಾಸಪಟ್ಟಿ ಮತ್ತು ಪ್ರವಾಸ ದಿನಚರಿಯ ಅನುಮೋದನೆ ಇನ್ನೂ ಮುಂತಾದ ಸೇವಾ ಸೌಲಭ್ಯಗಳು ಇತ್ಯಾದಿ) ಈ ಹಿನ್ನೆಲೆಯಲ್ಲಿ ಇಲಾಖೆಯ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ಅಧಿಕಾರಿಗಳು ಸೇವಾ ಸೌಲಭ್ಯಗಳನ್ನು ಪಡೆಯಲು ಮನವಿ ಸಲ್ಲಿಸಿದಾಗ ತಂತ್ರಾಂಶದಲ್ಲಿ ದಾಖಲಿಸಿದ ಮಾಹಿತಿಯನ್ನೇ ಪರಿಗಣಿಸುವದರಿಂದ ತಮ್ಮ ಮಾಹಿತಿಯನ್ನು ಸಂಪೂರ್ಣವಾಗಿ ಮತ್ತು ನಿಖರವಾಗಿ ಅಳವಡಿಸುವುದು ಕಡ್ಡಾಯವಾಗಿದೆ.

ಸೇವಾ ಸೌಲಭ್ಯವನ್ನು ಹಾಲಿ ಇರುವ ನಿಯಮಾನುಸಾರ ಮಂಜೂರು ಮಾಡುವ ಕಛೇರಿ ಪ್ರಕ್ರಿಯೆಗೆ ಎಲ್ಲಾ ಬೋಧಕೇತರ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಲಾಗಿನ್‌ಗಳನ್ನು ಸೃಜಿಸಲಾಗುತ್ತಿದ್ದು, ಈ ಉದ್ದೇಶಕ್ಕಾಗಿಯೂ ಸಿಬ್ಬಂದಿಯ ಸೇವಾ ಮಾಹಿತಿಯನ್ನು ಬಳಸಿಕೊಳ್ಳಲಾಗುತ್ತಿದೆ.

ಮೇಲ್ಕಂಡ ಕಾರಣಗಳಿಂದ ಎಲ್ಲಾ ಡಿ.ಡಿ.ಓಗಳು ತಮ್ಮ ಹಾಗೂ ಎಲ್ಲಾ ಅಧೀನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಯ ಸೇವಾ ಮಾಹಿತಿಯು ಅಳವಡಿಕೆಯಾಗಿರುವುದು ಮತ್ತು ಸದರಿ ಮಾಹಿತಿಯು ದೋಷರಹಿತವಾಗಿರುವುದರ ಬಗ್ಗೆ **ಅತೀ ತುರ್ತು** ಎಂದು ಪರಿಗಣಿಸಿ ಪರಿಶೀಲಿಸಿ ದೃಢೀಕರಿಸುವುದು ಕಡ್ಡಾಯವಾಗಿರುತ್ತದೆ.

ಯಾವುದೇ ಸಿಬ್ಬಂದಿಯ ಮಾಹಿತಿಯು ದತ್ತಾಂಶದಲ್ಲಿ ಲಭ್ಯವಿಲ್ಲದಿದ್ದಲ್ಲಿ, ತಕ್ಷಣವೇ ನಮೂದಿಸಲು ಸೂಕ್ತ ಕ್ರಮ ಕೈಗೊಳ್ಳುವುದು. ಸಿಬ್ಬಂದಿ/ಅಧಿಕಾರಿಗಳು ವರ್ಗಾವಣೆ, ವಯೋನಿವೃತ್ತಿ, ಸ್ವಯಂ ನಿವೃತ್ತಿ, ಮರಣ, ವಜಾ ಹೊಂದಿದಲ್ಲಿ ಆ ವಿವರವನ್ನು ತಂತ್ರಾಂಶದಲ್ಲಿ ತಕ್ಷಣವೇ ಸಂಬಂಧಪಟ್ಟ ಡಿ.ಡಿ.ಓಗಳು ಇಂದೀಕರಿಸತಕ್ಕದ್ದು. ಈ ರೀತಿ ಎಲ್ಲಾ ಮಾಹಿತಿಗಳನ್ನು ತಂತ್ರಾಂಶದಲ್ಲಿ ಅಳಡಿಸುವ ಮೂಲಕ ದತ್ತಾಂಶವನ್ನು ಇಂದೀಕರಿಸುವುದು ಅತ್ಯಗತ್ಯವಾಗಿದೆ ಹಾಗೂ ಆದ್ಯ ಕರ್ತವ್ಯವಾಗಿದೆ.

ಎಲ್ಲಾ ಡಿಡಿಓಗಳು ತಮ್ಮ ವ್ಯಾಪ್ತಿಯ ಶಿಕ್ಷಕರಿಗೆ **ಶಿಕ್ಷಕರ ಸೇವಾ ಮಾಹಿತಿ ತಂತ್ರಾಂಶದಲ್ಲಿ** **Teacher Login** ನಲ್ಲಿ ಅವರ **KGID** ಸಂಖ್ಯೆ ಮತ್ತು **OTP** ಮೂಲಕ ಲಾಗಿನ್ ಆಗಿ ತಮ್ಮ ತಮ್ಮ ಮಾಹಿತಿ ಪರಿಶೀಲಿಸಲು ಮತ್ತು ಅಗತ್ಯವಿದ್ದಲ್ಲಿ ಸರಿಪಡಿಸಲು ಆಯಾ ಡಿಡಿಓಗಳನ್ನು ಸಂಪರ್ಕಿಸುವಂತೆ ಸೂಚನೆ ನೀಡಲು ತಿಳಿಸಿದೆ.

ಮನವಿ ಸಲ್ಲಿಸುವ ಸಿಬ್ಬಂದಿ/ಅಧಿಕಾರಿಗಳು ಸೇವಾ ಸೌಲಭ್ಯಗಳನ್ನು ಪಡೆಯಲು ಕೋರಿಕೆಯನ್ನು ಸಲ್ಲಿಸಲು ಸೇವಾ ಸೌಲಭ್ಯ ಒದಗಿಸಲು ದತ್ತಾಂಶದಲ್ಲಿ ಲಭ್ಯವಿರುವ ಕರ್ತವ್ಯದ ಸ್ಥಳ, ಪದನಾಮ, ಸೇವಾವಿವರ, ವಿದ್ಯಾರ್ಹತೆ ಮತ್ತಿತರೆ ಮಾಹಿತಿಗಳನ್ನೇ ಅಂತಿಮ ಎಂದು ಪರಿಗಣಿಸುವುದರಿಂದ **ದಿನಾಂಕ:-12-02-2019ರೊಳಗೆ** ಪರಿಶೀಲಿಸಿ, ಇಂದೀಕರಿಸಲು ಈ ಮೂಲಕ ಸೂಚಿಸಿದೆ.

ಮಾಹಿತಿ ಅಳವಡಿಕೆ ಮತ್ತು ಇಂದೀಕರಿಸುವ ಪ್ರಕ್ರಿಯೆಯಲ್ಲಿ ಯಾವುದೇ ಗೊಂದಲಗಳಿದ್ದಲ್ಲಿ ವಿವರವನ್ನು **sadpiegov@gmail.com** ಗೆ ಈ-ಮೇಲ್ ಮೂಲಕ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಈ ಮೂಲಕ ತಿಳಿಸಿದೆ.

**ಜಂಟಿ ನಿರ್ದೇಶಕರು (ಆಡಳಿತ)**
**ಸಾರ್ವಜನಿಕ ಶಿಕ್ಷಣ ಇಲಾಖೆ**

**ಪ್ರತಿಯನ್ನು**

1. **ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು, ಇವರಿಗೆ ಗೌರವಪೂರ್ವಕವಾಗಿ ಸಲ್ಲಿಸಿದೆ.**
2. ನಿರ್ದೇಶಕರು. ಎಸ್.ಎಸ್.ಎ. ಬೆಂಗಳೂರು ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.

**ಇವರಿಗೆ,**

1. ಅಪರ ಆಯುಕ್ತರು, ಗುಲ್ಬರ್ಗಾ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
2. ಅಪರ ಆಯುಕ್ತರು ಧಾರವಾಡ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
3. ನಿರ್ದೇಶಕರು( ಪ್ರಾಥಮಿಕ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ನಿರ್ದೇಶಕರು(ಪ್ರೌಢ ಶಿಕ್ಷಣ), ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
5. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
6. ನಿರ್ದೇಶಕರು, ಕರ್ನಾಟಕ ಪ್ರೌಡ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
7. ನಿರ್ದೇಶಕರು, ಉರ್ದು ಮತ್ತು ಭಾಷಾ ಅಲ್ಪಸಂಖ್ಯಾತ ಶಾಲೆಗಳ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
8. ನಿರ್ದೇಶಕರು(ಇತರೆ ಪರೀಕ್ಷೆಗಳು), ಮಲ್ಲೇಶ್ವರಂ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
9. ನಿರ್ದೇಶಕರು, ಸಿಸ್ಲೆಪ್, ಧಾರವಾಡ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ

10. ವಿಭಾಗೀಯ ಸಹನಿರ್ದೇಶಕರು, ಬೆಂಗಳೂರು, ಮೈಸೂರು, ಬೆಳಗಾವಿ, ಕಲ್ಬುರ್ಗಿ ವಿಭಾಗ , ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
11. ಸಹ ನಿರ್ದೇಶಕರು ಮಧ್ಯಾಹ್ನ ಉಪಹಾರ ಯೋಜನೆ ಬೆಂಗಳೂರು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
12. ರಾಜ್ಯದ ಎಲ್ಲಾ ಪ್ರಾಂಶುಪಾಲರು, ಸಿ.ಟಿ.ಇ, ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
13. ರಾಜ್ಯದ ಎಲ್ಲಾ ಉಪನಿರ್ದೇಶಕರು (ಆಡಳಿತ) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
14. ರಾಜ್ಯದ ಎಲ್ಲಾ ಉಪನಿರ್ದೇಶಕರು (ಡಯಟ್) ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ
15. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
16. ಕಛೇರಿ ಪ್ರತಿ.